**ದಿನಾಂಕ:28.10.2013ರಂದು ಮಧ್ಯಾಹ್ನ 12.00 ಗಂಟೆಗೆ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೌನ್ಸಿಲ್ ಸಭಾಂಗಣದಲ್ಲಿ ನಿರ್ದೇಶಕರು, ಮಿಮ್ಸ್ ಮಂಡ್ಯರವರ ಅಧ್ಯಕ್ಷತೆಯಲ್ಲಿ ನಡೆದ ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವಿವಿಧ ವಿಭಾಗಗಳ ಮುಖ್ಯಸ್ಥರುಗಳ ಸಭೆಯ ನಡಾವಳಿಗಳು.**

ನಿರ್ದೇಶಕರು ಮೇಲ್ಕಂಡ ಸಭೆಯಲ್ಲಿ ಹಾಜರಾಗಿದ್ದ ಎಲ್ಲಾ ವಿಭಾಗಗಳ ಮುಖ್ಯಸ್ಥರುಗಳನ್ನು ಸಭೆಗೆ ಸ್ವಾಗತಿಸಿದರು.

1) ಎಲ್ಲಾ ವಿಭಾಗದ ಮುಖ್ಯಸ್ಥರುಗಳಿಗೆ 2014-15ನೇ ಸಾಲಿನ ಆಯವ್ಯಯದ ಪಟ್ಟಿಯನ್ನು ಅತೀ ತುರ್ತಾಗಿ ಕಛೇರಿಗೆ ತಪ್ಪದೆ ಸಲ್ಲಿಸುವಂತೆ ಸಭೆಯಲ್ಲಿ ಹಾಜರಿದ್ದ ಎಲ್ಲಾ ವಿಭಾಗದ ಮುಖ್ಯಸ್ಥರಿಗೂ ನಿರ್ದೇಶಕರು ಸೂಚಿಸಿದರು.

2) ಸಂಸ್ಥೆಯ ಪೆಥಾಲಜಿ ವಿಭಾಗಕ್ಕೆ ಸಂಬಂಧಿಸಿದಂತೆ ಆರ್.ಡಿ.ಎಲ್ ಘಟಕದಲ್ಲಿ Reports ಗಳನ್ನು ಸರಿಯಾದ ರೀತಿಯಲ್ಲಿ ನೀಡುತ್ತಿಲ್ಲದಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಿ ಸಂಬಂಧಪಟ್ಟ ಮುಖ್ಯಸ್ಥರಿಗೆ ಇನ್ನು ಮುಂದೆ ಸರಿಯಾದ ರೀತಿಯಲ್ಲಿ ನೀಡುವಂತೆ ಹಾಗೂ ಒ.ಬಿ.ಜಿ ಮತ್ತು ಮಕ್ಕಳ ವಿಭಾಗದಲ್ಲಿರುವ Demo Room ಗಳಲ್ಲಿ ಒಂದನ್ನು Lab ಗೆ ವ್ಯವಸ್ಥೆಯನ್ನು ಮಾಡಿಕೊಳ್ಳಲು ವೈದ್ಯಕೀಯ ಅಧೀಕ್ಷಕರು ರವರಿಗೆ ನಿರ್ದೇಶಕರು ಸೂಚಿಸಿದರು.

3) ಸಂಸ್ಥೆಯ ಎಲ್ಲಾ ವಿಭಾಗಗಳಿಗೂ 20 ನಿಮಿಷಗಳ Backup ಇರುವಂತಹ ಯು.ಪಿ.ಎಸ್‌ಗಳು ಮತ್ತು Antivirus software ನ್ನು ಒದಗಿಸಿಕೊಡುವುದಾಗಿ ಎಲ್ಲಾ ವಿಭಾಗದ ಮುಖ್ಯಸ್ಥರಿಗೆ ನಿರ್ದೇಶಕರು ಸಭೆಯಲ್ಲಿ ತಿಳಿಸಿದರು.

4) ಸಂಸ್ಥೆಯ ಬೋಧಕ ಆಸ್ಪತ್ರೆಯ ಒ.ಪಿ.ಡಿ ಬಳಿ ರೋಗಿಗಳಿಗೆ ಉಪಯೋಗವಾಗುವಂತೆ ಕುಳಿತುಕೊಳ್ಳಲು ಮತ್ತು ರೋಗಿಗಳ ಜೊತೆ ಬರುವಂತಹವರಿಗೆ ಕುಳಿತುಕೊಳ್ಳಲು ಶೆಲ್ಟರ್‌ಗಳನ್ನು ನಿರ್ಮಿಸುತ್ತಿದ್ದು ಅಲ್ಯೂಮಿನಿಯಂ ಪಾರ್ಟಿಸನ್ ಕಾರ್ಯವು ಸದ್ಯದಲ್ಲಿ ಪ್ರಾರಂಭಗೊಳ್ಳುವುದಾಗಿ ಸಭೆಯಲ್ಲಿ ಹಾಜರಿದ್ದ ಎಲ್ಲರಿಗೂ ನಿರ್ದೇಶಕರು ತಿಳಿಸಿದರು.

5) ಸಂಸ್ಥೆಯ ಬಾಲಕ/ಬಾಲಕಿಯರ ವಿದ್ಯಾರ್ಥಿನಿಲಯಗಳಲ್ಲಿ ವಾಟರ್ ಟ್ಯಾಂಕ್‌ಗಳನ್ನು ಬದಲಾಯಿಸುವಂತೆ ನಿಲಯಪಾಲಕರು ಸಭೆಯಲ್ಲಿ ನಿರ್ದೇಶಕರ ಗಮನಕ್ಕೆ ತರಲಾಗಿ ಹಾಸ್ಟೆಲ್‌ಗೆ ಸಂಬಂಧಿಸಿದಂತೆ ಕುಂದು ಕೊರತೆಗಳನ್ನು ಬಗೆಹರಿಸಲು ಒಂದು ಸಭೆಯನ್ನು ಏರ್ಪಡಿಸಲು ನಿಲಯಪಾಲಕರಿಗೆ ನಿರ್ದೇಶಕರು ಸೂಚಿಸಿದರು.

6) ಸಂಸ್ಥೆಯ ವಿಧಿವೈದ್ಯಶಾಸ್ತ್ರ ವಿಭಾಗ ಹಾಗೂ ರಕ್ತನಿಧಿ ಕೇಂದ್ರಕ್ಕೆ ಮತ್ತು ನೇತ್ರಚಿಕಿತ್ಸಾ ವಿಭಾಗದ ತಾತ್ಕಾಲಿಕ ಶಸ್ತ್ರಚಿಕಿತ್ಸಾ ಕೊಠಡಿಗೆ ಸಂಬಂಧಪಟ್ಟ ಮುಖ್ಯಸ್ಥರು ಜನರೇಟರ್ (125 ಕೆ.ವಿ.ಎ) ಅವಶ್ಯಕತೆ ಇರುವುದಾಗಿ ಸಭೆಯಲ್ಲಿ ನಿರ್ದೇಶಕರ ಗಮನಕ್ಕೆ ತಂದರು ಈ ಬಗ್ಗೆ ಕ್ರಮಕೈಗೊಳ್ಳವುದಾಗಿ ಮುಖ್ಯಸ್ಥರುಗಳಿಗೆ ನಿರ್ದೇಶಕರು ತಿಳಿಸಿದರು.

7) ಸಂಸ್ಥೆಯ ಮಕ್ಕಳ ವಿಭಾಗಕ್ಕೆ ಹೊಸದಾಗಿ ನಿರ್ಮಿಸಿರುವಂತಹ ಕಟ್ಟಡದಲ್ಲಿ ಕೆಲವು ಕೊರತೆಗಳಿರುವ ಬಗ್ಗೆ ನಿರ್ದೇಶಕರ ಗಮನಕ್ಕೆ ತರಲಾಗಿ ಅದರ ಬಗ್ಗೆ ಈಗಾಗಲೇ ಕ್ರಮಕೈಗೊಂಡಿರುವುದಾಗಿ ಹಾಗೂ ಅದರ ಕೆಲಸವು ಶೀಘ್ರದಲ್ಲಿ ಪ್ರಾರಂಭಗೊಳ್ಳುವುದಾಗಿ ತಿಳಿಸಿದರು. ಸದರಿ ಕಟ್ಟಡದ ವಾರ್ಡ್‌ಗೆ Cot ಗಳನ್ನು ಹೊಸದಾಗಿ ಕೊಡಲು ವೈದ್ಯಕೀಯ ಅಧೀಕ್ಷಕರು ರವರಿಗೆ ನಿರ್ದೇಶಕರು ಸೂಚಿಸಿದರು.

8) ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳು ತಮ್ಮ ವಿಭಾಗದಲ್ಲಿ ತಮ್ಮ ಅಧೀನಕ್ಕೆ ಒಳಪಡುವ ಎಲ್ಲಾ ಸಿಬ್ಬಂದಿಗಳಿಗೂ ರಜೆಯ ಅನುಮತಿಯನ್ನು ನೀಡುತ್ತಿದ್ದು, ಇನ್ನು ಮುಂದೆ ರಜೆಗೆ ಅನುಮತಿಯನ್ನು ನೀಡುವ ಮುನ್ನ ಅವರ ಖಾತೆಯಲ್ಲಿ ಎಷ್ಟು ರಜೆಗಳು ಇವೆ ಎಂಬುದನ್ನು ಖಚಿತ ಪಡಿಸಿಕೊಂಡು ನಂತರ ಅನುಮತಿಯನ್ನು ನೀಡಲು ಮತ್ತು ವಿಭಾಗದ ಸಿಬ್ಬಂದಿಗಳ ರಜೆಗಳಿಗೆ ಸಂಬಂಧಿಸಿದಂತೆ ಒಂದು ಕಡತವನ್ನು ಇಟ್ಟು ಅದರಲ್ಲಿ ನಮೂದಿಸಲು ಮುಖ್ಯಸ್ಥರುಗಳಿಗೆ ಸೂಚಿಸಿದರು.

9) ಸಂಸ್ಥೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಜ್ಯೂನಿಯರ್ ರೆಸಿಡೆಂಟ್‌ಗಳು ತಮಗೆ ಇಷ್ಟಬಂದ ರೀತಿಯಲ್ಲಿ LWP ಹಾಕುತ್ತಿದ್ದು ಇದನ್ನು ಮುಖ್ಯಸ್ಥರುಗಳು ಗಮನಿಸದೆ ಅನುಮತಿಯನ್ನು ನೀಡುತ್ತಿದ್ದು, ಜ್ಯೂನಿಯರ್ ರೆಸಿಡೆಂಟ್‌ಗಳಿಗೆ ಕೇವಲ 10 ದಿನಗಳು ಮಾತ್ರ LWP ಹಾಕಲು ಅನುಮತಿಯನ್ನು ನೀಡಲು ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

10) ಸಂಸ್ಥೆಯ ಕ್ಲಿನಿಕಲ್ ವಿಭಾಗದ ಮುಖ್ಯಸ್ಥರುಗಳು ಮತ್ತು ವೈದ್ಯರುಗಳು ತಮ್ಮ ಒ.ಪಿ.ಡಿ ದಿನದಲ್ಲಿ Permission ತೆಗೆದುಕೊಳ್ಳುತ್ತಿದ್ದು ಒ.ಪಿ.ಡಿ ಗೆ ಬರುವಂತಹ ರೋಗಿಗಳಿಗೆ ತುಂಬಾ ತೊಂದರೆ ಆಗುತ್ತಿರುವುದರಿಂದ ಇನ್ನು ಮುಂದೆ ಒ.ಪಿ.ಡಿ ಇರುವಂತಹ ವೈದ್ಯರುಗಳು Permission ತೆಗೆದುಕೊಳ್ಳಬಾರದೆಂದು ನಿರ್ದೇಶಕರು ಸೂಚಿಸಿದರು.

11) ಸಂಸ್ಥೆಯ ಕ್ಲಿನಿಕಲ್ ವಿಭಾಗದ ವೈದ್ಯರುಗಳು ಸರ್ಕಾರಿ ರಜೆ ದಿವಸಗಳಲ್ಲಿ Permission ತೆಗೆದುಕೊಳ್ಳುತ್ತಿರುವುದರಿಂದ ರೋಗಿಗಳಿಗೆ ತೊಂದರೆಯಾಗುತ್ತಿದ್ದು, ತಮಗೆ ಸಂಬಂಧಪಟ್ಟ ಒ.ಪಿ.ಡಿ ದಿನದಲ್ಲಿ ಕಡ್ಡಾಯವಾಗಿ ಕರ್ತವ್ಯಕ್ಕೆ ಬರುವಂತೆ ಎಲ್ಲಾ ವೈದ್ಯರಿಗೂ ಸೂಚಿಸಿ ಹಾಗೂ Permission ತೆಗೆದುಕೊಂಡು ನಂತರ ಬಂದು ಅರ್ಜಿಯನ್ನು ನೀಡುತ್ತಿರುವುದು ಗಮನಕ್ಕೆ ಬಂದಿದ್ದು, ಇನ್ನು ಮುಂದೆ ಅರ್ಜಿಯನ್ನು ನೀಡಿ ಸಂಬಂಧಪಟ್ಟ ಮುಖ್ಯಸ್ಥರಿಂದ ಅನುಮತಿಯನ್ನು ಪಡೆದ ನಂತರ ತೆರಳುವ ಬಗ್ಗೆ ತಿಳಿಸಲು ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

12) ಸಂಸ್ಥೆಯ ಕ್ಲಿನಿಕಲ್ ವಿಭಾಗದ ವೈದ್ಯರುಗಳು ತರಗತಿಗಳನ್ನು ೮.೦೦ ಗಂಟೆಗೆ ತೆಗೆದುಕೊಳ್ಳುವ ಬದಲು ೮.೩೦ಕ್ಕೆ ತೆಗೆದುಕೊಳ್ಳುತ್ತಿರುವ ಬಗ್ಗೆ ಈಗಾಗಲೇ ಹಲವಾರು ಬಾರಿ ಹೇಳಿದರೂ ಸಹ ತರಗತಿಗಳನ್ನು ತಡವಾಗಿ ತೇಗೆದುಕೊಳ್ಳುತ್ತಿರುವದರಿಂದ ವಿದ್ಯಾರ್ಥಿಗಳಿಗೆ ತೊಂದರೆ ಆಗುತ್ತಿರುವುದರಿಂದ ಇನ್ನು ಮುಂದೆ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳು ಕಡ್ಡಾಯವಾಗಿ ತರಗತಿಗಳನ್ನು ಸರಿಯಾದ ಸಮಯಕ್ಕೆ ತೆಗೆದುಕೊಳ್ಳುವಂತೆ ತಮ್ಮ ವಿಭಾಗದ ವೈದ್ಯರುಗಳಿಗೆ ತಿಳಿಸಲು ಮತ್ತೊಮ್ಮೆ ನಿರ್ದೇಶಕರು ಸೂಚಿಸಿದರು.

13) ಸಂಸ್ಥೆಯ ಕ್ಲಿನಿಕಲ್ ವಿಭಾಗದ ಕೆಲವು ವೈದ್ಯರುಗಳು ತಮಗೆ ಸಂಬಂಧಿಸಿದ ತರಗತಿಗಳನ್ನು ತಾವೇ ತೆಗೆದುಕೊಳ್ಳದೆ ಬೇರೆ ವೈದ್ಯರಿಗೆ ತರಗತಿಗಳನ್ನು ತೆಗೆದುಕೊಳ್ಳುವಂತೆ ಹೇಳಿ ತಾವು ಕರ್ತವ್ಯದ ಸ್ಥಳದಲ್ಲಿ ಇರದೆ ಬೇರಡೆ ಹೋಗುತ್ತಿದ್ದು, ಈ ಬಗ್ಗೆ ಎಲ್ಲಾ ವೈದ್ಯರುಗಳು ತಮ್ಮ ತಮ್ಮ ತರಗತಿಗಳನ್ನು ತಾವೇ ತೆಗೆದುಕೊಳ್ಳುವಂತೆ ಸೂಚಿಸಲು ಎಲ್ಲಾ ಮುಖ್ಯಸ್ಥರಿಗೆ ನಿರ್ದೇಶಕರು ಸೂಚಿಸಿದರು.

14) ಸಂಸ್ಥೆಯ ಎಲ್ಲಾ ವಿಭಾಗದ ಮುಖ್ಯಸ್ಥರುಗಳು ತಮ್ಮ ವಿಭಾಗದಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರುಗಳ ಹತ್ತಿರ ದಾಖಲೆಗಳನ್ನು ಪಡೆದು ವಿಭಾಗದಲ್ಲಿ ಒಬ್ಬರಿಗೆ ಒಂದು ಕಡತವನ್ನು ಕಡ್ಡಾಯವಾಗಿ ತೆರದು ಇಡುವಂತೆ ಮತ್ತೊಮ್ಮೆ ಸೂಚಿಸಿದರು ಹಾಗೂ ಎಲ್ಲಾ ವೈದ್ಯರಿಗೂ ಸರಿ ಸಮನಾದ ಕೆಲಸಗಳನ್ನು ಪತ್ರದ ಮುಖಾಂತರ ಕೊಟ್ಟು ಅದರ ಪ್ರತಿಯನ್ನು ನಿರ್ದೇಶಕರ ಕಛೇರಿಗೆ ಕೂಡಲೇ ಕಳುಹಿಸಿಕೊಡಲು ತಿಳಿಸಿದರು.

15) ಬೋಧಕ ಆಸ್ಪತ್ರೆಯ ತುರ್ತುಚಿಕಿತ್ಸಾ ಘಟಕದಲ್ಲಿ ಒಳರೋಗಿ ವಿಭಾಗಕ್ಕೆ ದಾಖಲಾಗುವಂತಹ ರೋಗಿಗಳ ನೋಟ್‌ಶೀಟ್‌ನಲ್ಲಿ ಸಿ.ಎಂ.ಒ ಗಳು ನೋಡಿದ ಮೇಲೆ ಸಂಬಂಧಪಟ್ಟ ಮುಖ್ಯಸ್ಥರುಗಳು ಕಡ್ಡಾಯವಾಗಿ ನೋಟ್ ನಮೂದಿಸಲು ನಿರ್ದೇಶಕರು ಸೂಚಿಸಿದರು.

16) ಬೋಧಕ ಆಸ್ಪತ್ರೆಯ O.T postings ಗೆ ತೆರಳುವ ವೈದ್ಯರುಗಳು ಕಡ್ಡಾಯವಾಗಿ ಸಂಬಂಧಪಟ್ಟ ವಿಭಾಗದ ಮುಖ್ಯಸ್ಥರುಗಳ Counter Sign ಮಾಡಿಸಿಕೊಂಡು ನಂತರ O.T postings ಗೆ ತೆರಳುವಂತೆ ಸೂಚಿಸಲು ಸಂಬಂಧಪಟ್ಟ ಮುಖ್ಯಸ್ಥರುಗಳಿಗೆ ನಿರ್ದೇಶಕರು ಸೂಚಿಸಿದರು.

17) ಬೋಧಕ ಆಸ್ಪತ್ರೆಯ O.T Listನ್ನು ವೈದ್ಯಕೀಯ ಅಧೀಕ್ಷಕರ ಗಮನಕ್ಕೆ ತರದೆ ಸಿ.ಎಂ.ಒ ಗಳು ತಾವೇ ಸಹಿಯನ್ನು ಮಾಡುತ್ತಿದ್ದು, ಇನ್ನು ಮುಂದೆ O.T Listನ್ನು ಸಿದ್ಧಪಡಿಸಿ ಸಿ.ಎಂ.ಒ ರವರೆ ಸಹಿಯನ್ನು ಹಾಕಿ ಅದರ ಪ್ರತಿಯನ್ನು ವೈದ್ಯಕೀಯ ಅಧೀಕ್ಷಕರಿಗೆ ಕಳುಹಿಸಿಕೊಡುವಂತೆ ಕ್ರಮ ವಹಿಸಲು ವೈದ್ಯಕೀಯ ಅಧೀಕ್ಷಕರಿಗೆ ನಿರ್ದೇಶಕರು ಸೂಚಿಸಿದರು.

ನಿರ್ದೇಶಕರು,
ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ಮಂಡ್ಯ.